ತಾನೂ ಕಾಣಿಕೆ ಕಳುಹಿಸಿದಳು. ಇಬ್ಬರ ಕಾಣಿಕೆಯೂ ಗೋವಿಂದನಿದ್ದ ತಿರುಪತಿಗೆ ತಲುಪಿತು.

ಆರೇಳು ತಿಂಗಳುಗಳ ಕಾಲ ಕಾದು ನೋಡಿದ ಗುರುರಾಜ ಹುಡುಕುವ ಪ್ರಯತ್ನವನ್ನೇ ಕೈ ಬಿಟ್ಟ. ಮಾಲತಿಯೂ ನಿಟ್ಟುಸಿರು ಬಿಟ್ಟಳು. ತಿರುಪತಿಯಲ್ಲಿ ಯಾರಿಗೂ ಬೇಡವಾದ ಗೋವಿಂದ, ಎಲ್ಲರಿಗೂ ಬೇಕಾದ ಗೋವಿಂದನ ದರ್ಶನಕ್ಕೆ ವರ್ಷಗಟ್ಟಲೆ ಕಾದು ತಿರುಪತಿಯ ಗೋವಿಂದನೇ ಆಗಿ ಹೋದ. ದಿನನಿತ್ಯವೂ ಮೆಟ್ಟಿಲು ಹತ್ತಿಳಿಯುತ್ತಿದ್ದ ಗೋವಿಂದ ಸಾಕಷ್ಟು ಬದಲಾದ. ಒಮ್ಮೆಯಾದರೂ ದೇವರನ್ನು ಸಂಪೂರ್ಣ ಕಂಡ ಮೇಲೆಯೇ ವಾಪಸು ಹೋಗುವುದೆಂದು ನಿರ್ಧರಿಸಿ ಗೋವಿಂದಾ, ಗೋವಿಂದಾ, ಏಳುಕೊಂಡಲವಾಡ ಗೋವಿಂದಾ... ಗೋವಿಂದಾ ಎನ್ನುತ್ತಾ ಸಾಲಿನಲ್ಲಿ ನಿಂತು ದೇವರನ್ನು ನೋಡಲು ಪ್ರತಿನಿತ್ಯ ಹೋಗುತ್ತಿದ್ದ ಮತ್ತು ಯಥಾಪ್ರಕಾರ ಹತ್ತಿರ ಹೋಗುವಷ್ಟರಲ್ಲಿ ಸಿಬ್ಬಂದಿಗಳು ತಳ್ಳಿ ಮುಂದೆ ಕಳುಹಿಸುತ್ತಿದ್ದರು. ಇದೆಲ್ಲದರ ಮಧ್ಯೆ ಗೋವಿಂದನನ್ನು ತಿರುಪತಿಯಲ್ಲಿ ಕಂಡ ಹಾಗಾಯ್ತು ಎಂಬ ಸಂಶಯವನ್ನು ಹತ್ತಿರದ ಸಂಬಂಧಿಯೊಬ್ಬರು ಗುರುರಾಜನ ಮುಂದಿಟ್ಟರು. ಆ ಮಾತು ಕೇಳಿ ಗಾಬರಿಯಾದ ಮಾಲತಿ ಬೇಕಂತಲೇ, "ತಿರುಪತಿಯಲ್ಲಿ ಗೋವಿಂದನಲ್ಲದೇ, ಗೋಪಾಲನ ಕಾಣೋಕೆ ಆಗುತ್ತಾ" ಎಂದು ಕುಟುಕಿದಳು. ಗುರುರಾಜನೂ, "ಆಗಲಿ, ಅವನಿಗೆ ತಿರುಪತಿ ದೇವರ ಸೇವೆ ಮಾಡೋ ಯೋಗ ಇತ್ತು ಅನ್ಸುತ್ತೆ. ಪುಣ್ಯಾತ್ಮ" ಎಂದು ಹುಡುಕುವ ಸಾಧ್ಯತೆಯನ್ನು ತಳ್ಳಿ ಹಾಕಿದ. ಸ್ವಲ್ಪ ಸಮಯದ ತನಕ ಗೋವಿಂದ ತಿರುಪತಿಯಲ್ಲೇ ಮದುವೆ ಆಗಿದ್ದಾನಂತೆ, ದೇವಸ್ಥಾನದಲ್ಲೇ ಕೆಲಸಕ್ಕೆ ಸೇರಿದ್ದಾನಂತೆ ಎಂಬೆಲ್ಲಾ ಮಾತುಗಳು ಸಂಬಂಧಿಕರ ವಲಯದಲ್ಲಿ ಹರಿದಾಡಿದವು. ಶ್ಯಾಮರಾಯರು ಮನೆಯ ಟೀವಿಯಲ್ಲಿ ಟಿಟಿಡಿ ಚಾನೆಲ್ಲು ಹಾಕಿದಾಗಲೆಲ್ಲಾ ಗೋವಿಂದ ಕಾಣಬಹುದಾ ಎಂದು ಕೂತಲ್ಲಿಂದಲೇ ಕಣ್ಣು ಹಾಯಿಸುತ್ತಿದ್ದರು. ಅವರು ಟೀವಿ ನೋಡಿದಂತೆಲ್ಲಾ ತಳಮಳಗೊಳ್ಳುತ್ತಿದ್ದ ಶಾರದಕ್ಕ ಗೋವಿಂದ ಕಂಡೇ ಬಿಟ್ಟರೆ ಏನು ಗತಿಯೆಂದು ಯೋಚಿಸುತ್ತಿದ್ದಳು. ಮಾಲತಿ ದಿನಪತ್ರಿಕೆಗಳಲ್ಲಿ ಪ್ರಕಟವಾಗುವ ಅಪರಿಚಿತರ ಶವ ಪತ್ತೆ ಎಂಬ ಸುದ್ದಿಗಳನ್ನು ಹುಡುಕಿ ಹುಡುಕಿ ಓದಲು ಶುರು ಮಾಡಿದಳು.

ಗೋವಿಂದ ಕಾಣೆಯಾದ ಒಂದೂವರೆ ವರ್ಷದ ನಂತರ ಮತ್ತೊಂದು ಸುದ್ದಿ ಗುರುರಾಜನನ್ನು ತಲುಪಿತು. 'ಗೋವಿಂದ ತಿರುಪತಿಯಲ್ಲೇ ಇರುವುದು ಹೌದಂತೆ. ದೇವಸ್ಥಾನದ ಯಾವುದೇ ಸಿಬ್ಬಂದಿಯ ಬಳಿ ಹೋಗಿ ಕೇಳಿದರೂ ಅವನ ಪರಿಚಯವಿದೆಯಂತೆ. ದಿನಾಲೂ ತಪ್ಪದೇ ದೇವರ ದರ್ಶನ ಮಾಡ್ತಾನಂತೆ. ಸದ್ಯದಲ್ಲೇ ಮನೆಗೆ ಬಂದರೂ ಬರಬಹುದು.' ಇದನ್ನು ಕೇಳಿದ ತಕ್ಷಣ ಒಳಗೆ ಓಡಿದ ಮಾಲತಿ ಕಳೆದ ಬಾರಿಗಿಂತ ಇಪ್ಪತ್ತು ರೂಪಾಯಿ ಜಾಸ್ತಿ ತೆಗೆದಿಟ್ಟಳು. ಅದನ್ನು ಗಮನಿಸಿದ ಗುರುರಾಜ ಹೆಂಡತಿಯ ವಿಚಿತ್ರ ವರ್ತನೆಯಿಂದ ದಿಗಿಲುಗೊಂಡು ಅವಳಿಗಿಂತಾ ಎರಡು ರೂಪಾಯಿ ಜಾಸ್ತಿ ತೆಗೆದಿಟ್ಟು ಬಲವಾಗಿ ಬೇಡಿದ, 'ದೇವರೇ, ಗೋವಿಂದನನ್ನು ನೀನೇ ನಿನ್ನ ಕಣ್ಣೆದುರಿನಲ್ಲಿ ಇಟ್ಟುಕೋ'.

## ಸ್ಕಂದ ಆಗುಂಬೆ

ಸ್ಕಂದ ಆಗುಂಬೆ ಎಂಬ ಹೆಸರಿನಲ್ಲಿ ಬರೆಯುವ ಕತೆಗಾರ ಸ್ಕಂದ ಕೆ.ಎನ್. ಮೂಲತಃ ಆಗುಂಬೆಯವರು. ಪ್ರಸ್ತುತ ಉಜಿರೆಯ ಎಸ್‌ಡಿಎಂ ಸ್ನಾತಕೋತ್ತರ ಕೇಂದ್ರದಲ್ಲಿ ಅಂತಿಮ ವರ್ಷದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಓದುತ್ತಿದ್ದಾರೆ.